**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 25/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **06**
ಸಿ.ಡಬ್ಲ್ಯೂ ನಂಃ **11**
ಸಾಕ್ಷಿಯನ್ನು ದಿನಾಂಕಃ **08-02-2024**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಪರಸಪ್ಪ |
| ತಂದೆಯ ಹೆಸರು | ಃ | ಶರಣಪ್ಪ ಅಗಸಿಮನಿ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಒಕ್ಕಲುತನ / ಟೇಲರಿಂಗ್ |
| ವಾಸ ಸ್ಥಳ | ಃ | ಕುಷ್ಟಗಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನೋಡಿದ ನಿಪಿ 1 ದೂರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕುಷ್ಟಗಿ ಪೊಲೀಸ ಠಾಣೆಯಲ್ಲಿ ಮಾಡಿದ್ದೆ. ಮಂಜುಳಾ ಆಶಾ ಕಾರ್ಯಕರ್ತೆಯ ಕೊಲೆಯಾಗಿದ್ದು ಆ ವಿಚಾರದಲ್ಲಿ ಪೊಲೀಸ ಠಾಣೆಗೆ ಹೋಗಿ ದೂರು ಕೊಡಬೇಕು ಎಂದು ಚಾಸಾ 1 ಕನಕಪ್ಪ ನನ್ನನ್ನು ಕರೆದುಕೊಂಡು ಹೋಗಿದ್ದರು. ಅವರಿಗೆ ಬರೆಯಲು ಬರುವುದಿಲ್ಲ ಎಂಬ ಕಾರಣಕ್ಕಾಗಿ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದು ಅವರು ಹೇಳಿದ ಹಾಗೇ ನಿಪಿ 1 ದೂರನ್ನು ನನ್ನ ಕೈಬರಹದಲ್ಲಿ ಬರೆದು ಸಹಿ ಮಾಡಿದ್ದೆ. ಚಾಸಾ 1 ಸಹಾ ದೂರಿಗೆ ಸಹಿ ಮಾಡಿ ಪೊಲೀಸರಿಗೆ ಕೊಟ್ಟರು.

2). ಒಂದು ತಿಂಗಳಾದ ನಂತರ ಮಂಜುಳಾರವರನ್ನು ಕೊಲೆ ಮಾಡಿದ ಆರೋಪಿಗಳು ಸಿಕ್ಕಿದ್ದಾರೆಂದು ಚಾಸಾ 1 ನನಗೆ ತಿಳಿಸಿ ಠಾಣೆಗೆ ಹೋಗಿ ನೋಡಿ ಬರೋಣಾ ಎಂದು ಕರೆದುಕೊಂಡು ಹೋಗಿದ್ದರು. ನಿದ್ದೆ ಗುಳಿಗೆ ಹಾಕಿ ಮಂಜುಳಾರವರನ್ನು ಕೊಲೆ ಮಾಡಿ ಕುರುಬನಾಳ ಎಂಬಲ್ಲಿ ಆಕೆಯ ಶವವನ್ನು ಸುಟ್ಟು ಹಾಕಿದ್ದರು ಎಂದು ಪೊಲೀಸ ಠಾಣೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಆ ದಿನ ನಾನು ಪೊಲೀಸ ಠಾಣೆಯಲ್ಲಿ ನೋಡಿದ ಆರೋಪಿಗಳು ಈಗ ನ್ಯಾಯಾಲಯದಲ್ಲಿದ್ದಾರೆ. ನನ್ನ ಹೇಳಿಕೆಯನ್ನು ಪೊಲೀಸರು ದಾಖಲು ಮಾಡಿಕೊಂಡಿದ್ದಾರೆ.

ಪಾಟೀ ಸವಾಲು ಃ 1ನೇ ಆರೋಪಿ ಪರ ವಕೀಲರಿಂದ

3). ನಾನು ಠಾಣೆಗೆ ಒಟ್ಟು 2 ಬಾರಿ ಹೋಗಿದ್ದೆ. ನಾನು ಕುಷ್ಟಗಿ ಕಾಯಿಪಲ್ಲೆ ಮಾರ್ಕೇಟ ಬಳಿ ಇದ್ದಾಗ ಚಾಸಾ 1 ನನ್ನನ್ನು ಬೇಟಿಯಾಗಿ ವಿಷಯ ತಿಳಿಸಿ ಠಾಣೆಗೆ

ಕರೆದುಕೊಂಡು ಹೋಗಿದ್ದರು. ಅಂದು ಬಹುಶಃ ಮಾರ್ಚ 17, 2016 ಇರಬಹುದು. ನನ್ನನ್ನು ಅವರು 11-30 - 12-00 ಗಂಟೆಗೆ ಬೇಟಿಯಾಗಿದ್ದರು. ಚಾಸಾ 1 ರವರ ಜೊತೆ ವಣಗೇರಿ ಗ್ರಾಮದವರು ಮತ್ತೊಬ್ಬರಿದ್ದರು ಅವರ ಹೆಸರು ಗೊತ್ತಿಲ್ಲ. ಮಂಜುಳಾ ರವರನ್ನು ಆರೋಪಿಗಳೇ ಕೊಲೆ ಮಾಡಿರುತ್ತಾರೆಂದು ನನಗೆ ಯಾರು ಹೇಳಿರಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ, ಆ ರೀತಿ ಠಾಣೆಯಲ್ಲಿ ಹೇಳಿದ್ದರು ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ. ಚಾಸಾ 1 ನನ್ನ ಸಂಬಂಧಿಯಲ್ಲ, ಪರಿಚಯಸ್ಥರು. ನಿಪಿ 1 ಸುಳ್ಳು ದೂರಾಗಿದೆ ಎಂದರೆ ಚಾಸಾ 1 ರವರು ಹೇಳಿದಂತೆ ನಾನು ಬರೆದಿದ್ದೇನೆ ಅಷ್ಟೇ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು : 2ನೇ ಆರೋಪಿ ಪರ ಶ್ರೀ ಬಿ ಕೆ ಡಿ ವಕೀಲರಿಂದ

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ